DC-334
T.P-2

(1)

51st Year of Publication ★ SATYAVADI Daily, MYORE 4

Reg No B G 155 11 7-1968

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆಖರ್ಚು ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

ಸತ್ಯವಾದಿ

Space available

For Permanent Advertisement.

ಸ್ಥಾಪಕರು : ಶ್ರೀಯುತ ಶ್ರೀನಿವಾಸ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [ 2 ಪೈಸೆ

# ಕನ್ನಡಿಗರ ಕುಂದುಕೊರತೆ-ಪರಿಶೀಲನೆಗೆ ಸಮ್ಮೇಳನ

**"ಸತ್ಯವಾದಿ" ಯ ಸ್ವರ್ಣೋತ್ಸವ**

"ಸತ್ಯವಾದಿ"-ಯ ಸ್ವರ್ಣೋತ್ಸವವನ್ನು ಜುಲೈನಲ್ಲಿ ನೆರೆವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮಿತ್ರಕರಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಕೆನ್ಯಾ ರವರು, ಶ್ರೀ ಎಂ. ಬಿ. ಬಸಪಯ್ಯನವರು, ಆಪೆರಾ ಟಾಕೀಸಿನವರು, ಪಹ್ಮಭೂಷಣ ನೇತ್ರದಾನಿ ಡಾ|| ಎಂ.ಸಿ ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೋ) ಯವರು ಶುಭಾಶಯಪೂರ್ವಕ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆಪರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

**ಚಿನ್ನದ ಬುದ್ಧ ಪ್ರತಿಮೆ ಕಳವು**

ಕೊಲಂಬೊ— ಮಾತಾಟದಲ್ಲಿನ ವಿಲ್ಪಾಲ ರಾಜ ಮಹವಿಹಾರದ ದೇವಾಲಯದಲ್ಲಿದ್ದ ರೂ. 250000 ಬೆಲೆಯ ಐತಿಹಾಸಿಕ ಪ್ರಸಿದ್ಧ ಚಿನ್ನದ ಬುದ್ಧ ಪ್ರತಿಮೆಯು ಕಳುವಾಗಿದೆ - ಪುರಾತನ ಸಿಂಹಳ ರಾಜನು ದೇವಾಲಯಕ್ಕೆ ಕೊಟ್ಟದ್ದುದು ಇದು.

★

**ಲಂಚಕೋರ ಉನ್ನತಾಧಿಕಾರಿಗಳು**

ಹೈದರಾಬಾದು— ಲಂಚದ ಮತ್ತು ದುಷ್ಕೃತ್ಯದ ಆರೋಪದ ಮೇಲೆ 13 ಮಂದಿ ಉನ್ನತ ಪೋಲೀಸು ಅಧಿಕಾರಿಗಳು ಸಸ್ಪೆಂಡು ಮಾಡಲ್ಪಟ್ಟಿರುವರು – ಇವರಲ್ಲಿ ಒಬ್ಬರು ಸ್ಪೆಷಲ್ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್, ಮತ್ತಿಬ್ಬರು ಡೆಪ್ಯೂಟಿ ಇನ್ಸ್‌ಪೆಕ್ಟರ್ ಆಫ್ ಪೋಲೀಸರು

★

**ಕ್ಷಿಪಣಿ ಸಿದ್ಧ**

ಲಂಡನ್— ಓಕಿನಾವಾದಲ್ಲಿಯ ಅಮೇರಿಕಾ ನಿಲ್ದಾಣಗಳನ್ನೂ, ಚೀನಾದಲ್ಲಿನ ಬೇಕಾದ ಸ್ಥಳಗಳನ್ನೂ ಹೊಡೆಯಬಲ್ಲ ಕ್ಷಿಪಣಿಗಳನ್ನು ಹೊರ ಮಂಗೋಲಿಯಾದಲ್ಲಿ ರಷ್ಯಾ ಸ್ಥಾಪಿಸಿರುವದೆಂದು ಸ್ಫೋಟವಾಗಿದೆ.

★

**ಹೆಚ್ಚು ಆದಾಯ**

ನವದೆಹಲಿ— ಸುಂಕ ಹಾಪು, ವಸೂಲಾಗಿರುವ ಬಾಬುಗಳ ಮೇಲಿನ ಉತ್ಪತ್ತಿಯು ಏಪ್ರಿಲ್‌ನಲ್ಲಿ ಹೆಚ್ಚಾಗಿದ್ದು ರೂ. 155·44 ಕೋಟಿ ದೊರೆತಿದೆ.

★

**ತೆಂಗಿನಕಾಯಿಗಳು ಸುಟ್ಟುಹೋದವು**

ತಿರುಚಿ— ಶ್ರೀರಂಗದಲ್ಲಿ 4 ಗೋದಾಮುಗಳಲ್ಲಿದ್ದ ಲಕ್ಷಾಂತರ ಕಾಯಿಗಳು ಬೇಕಿಕೆಯಕಸ್ಮಿಕಕ್ಕೆ ತುತ್ತಾದವು – ಸುಮಾರು ರೂ. 2 ಲಕ್ಷ ನಷ್ಟ.

★

**ಅತಿಥಿಗಳಿಗೆ ಆಹಾರ**

ಬೆಂಗಳೂರು— ಗೆಸ್ಟ್ ಕಂಟ್ರೋಲ್ ಆರ್ಡರ್ನ್ನು ಮತ್ತೂ ಸಡಲಿಸಲಾಗಿದೆ – ಸರಕಾರದ ಅಪ್ಪಣೆ ಇಲ್ಲದೆ 150 ಮಂದಿಗೆ ಆಹಾರ ಕೊಡಬಹುದು.

**ಪಾಕಿಸ್ಥಾನಕ್ಕೆ ಆಯುಧ ಸರಬರಾ**

ಮಾಸ್ಕೋ— ಪಾಕಿಸ್ಥಾನಕ್ಕೆ ಮುಂದೆ ಕಳುಹಿಸಲಾಗುವ ಮಿಲಿಟರಿ ಸರಬರಾಜು ಬಗ್ಗೆ ಭಾರತ-ರಷ್ಯಾ ಮೈತ್ರಿ ವಿಷಯ ದೃಷ್ಟಿಯಲ್ಲಿಟ್ಟುಕೊಂಡು, ನಿರ್ಧರಿಸಲಾಗುವುದೆಂದು ರಷ್ಯಾ ಪ್ರಧಾನಿ ಕೋಸಿಗಿನ್ ಹೇಳಿದರು.

★

**ಡಿ ಎಂ ಕೆ ಸ್ಪರ್ಧಿಸುವದು**

ಡಾಬರ್ಟ್‌ಸರ್‌ವೇಟಿ— ಮೈಸೂರು ಶಾಸನ ಸಭೆಗೆ ಚಿನ್ನದಗಣಿ ಕ್ಷೇತ್ರದ ಉಪ ಚುನಾವಣೆಯಲ್ಲಿ ಡಿ ಎಂ ಕೆ ಸ್ಪರ್ಧಿಸುವುದೆಂದು ಪಾರ್ಲಿಮೆಂಟು ಸದಸ್ಯ ಶ್ರೀ ವಿಶ್ವನಾಥಂ ಹೇಳಿದರು – ಕಾಂಗ್ರೆಸ್ಸನ್ನು ಸೋಲಿಸಲು ಚಿನ್ನದ ಗಣಿ ಭಾಗದ ಎಲ್ಲಾ ವಿರೋಧ ಪಕ್ಷಗಳೂ ಸಂಯುಕ್ತ ರಂಗ ಸ್ಥಾಪಿಸಲು ಮನವಿ ಮಾಡಿದರು.

●

**ಶಾಸನಸಭೆ**

ಬೆಂಗಳೂರು— ಎರಡು ಶಾಸನಸಭೆಗಳೂ ಆಗಸ್ಟು ಕಡೇ ವಾರ ಅಥವಾ ಸೆಪ್ಟೆಂಬರು ಮೊದಲನೇ ವಾರದಲ್ಲಿ ಸೇರಲಿರುವದೆಂದು ಗೊತ್ತಾಗಿದೆ.

●

**ಪೌರಸಭೆ**

ಮೈಸೂರು— ಪ್ರತಿ ತಿಂಗಳು ತಾ || 10 ಮತ್ತು 11 ರಂದು ನಗರದ ಎಲ್ಲಾ ಹೆಂಡದಂಗಡಿಗಳನ್ನು ಮುಚ್ಚಬೇಕೆಂಬ ಹೆಲ್ತ್ ಆಫೀಸರರ ಸಲಹೆಯನ್ನು ಪುರಸಭೆಯು ಒಪ್ಪಿತು ; ತಾ || ರಂದು ಗುಡಿಸುವವರಿಗೆ ಸಂಬಳ ಕೊಡುವ ದಿವಸ – ಮೇಟಗಳ್ಳಿಯಲ್ಲಿ ರೂ. 5 ಲಕ್ಷದ ಸಾಂಕಾಮಿಕ ರೋಗ ಆಸ್ಪತ್ರೆ ಕಟ್ಟಲು ನಿರ್ಧರಿಸಲಾಯಿತು ; ಸರ್ಕಾರದ ಒಪ್ಪಿತ ಕ್ಷಿಪ್ರದಲ್ಲೇ ಬಳು ನಿರೀಕ್ಷೆ ಇದೆ.

**ಗಡಿ ಸಲಹಾ ಸಮಿತಿ**

ಗುಲ್ಬರ್ಗ— ಮೈಸೂರು ರಾಜ್ಯದ ಎಂಟು ಮಂದಿ ಸಲಹಾ ಸಮಿತಿಯು ಮಂಗಳವಾರ 17 ಮಂದಿಯ ನಿವೇದನೆಗಳನ್ನು ಕೇಳಿದರು ಮಹಾರಾಷ್ಟ್ರ ರಾಜ್ಯದಿಂದ ಕನ್ನಡಿಗರಿಗುಂಟಾಗುತ್ತಿರುವ ಭೀತಿ ಮತ್ತು ಹಿಂಸೆ ಕುರಿತು ಇಬ್ಬರು ತಿಳಿಸಿದರು – ಮಹಾರಾಷ್ಟ್ರದಲ್ಲಿ ವಾಸಿಸುತ್ತಿರುವ ಕನ್ನಡಿಗರ ಕುಂದುಕೊರತೆ ತಗ್ಗಿಸಲು ಸಮಿತಿಯು ಆಗಸ್ಟ್ ಮೊದಲನೆ ವಾರದಲ್ಲಿ ಸಮ್ಮೇಳನ ನಡೆಸಲು ನಿರ್ಧರಿಸಿತು

**ಕನ್ನಡಿಗರ ಪ್ರತಿಭಟನೆ**

ಬೆಂಗಳೂರು ಆಂಧ್ರ ಮುಖ್ಯಮಂತ್ರಿ ಶ್ರೀ ಬ್ರಹ್ಮಾನಂದ ರೆಡ್ಡಿ ಅವರು ಕನ್ನಡಿಗರ ಬಗ್ಗೆ ಆಪಹಾಸಕರ ಮಾತುಗಳನ್ನಾಡಿರುವದರಿಂದ ಅವರ ಪ್ರತಿರೂಪವನ್ನು ದಹಿಸಲು ಕನ್ನಡ ಚಳವಳಿಗಾರರ ಕಾರ್ಯಕಾರಿ ಸಮಿತಿ ನಿರ್ಧರಿಸಿತು – ಅವರು ಕನ್ನಡಿಗರ ಕ್ಷಮಾಪಣೆ ಕೇಳದಿದ್ದರೆ, ರಾಜ್ಯದ ತೆಲುಗು ಭಾಷಾ ಸೂತನಾಡುವ ಭಾಗಗಳಲ್ಲಿ ಚಳವಳಿ ಹೊಡುವದಾಗಿ ತಿಳಿಸಿರುವರು

★

**ನೀರಿನ ವ್ಯಾಜ್ಯ**

ನವದೆಹಲಿ— ನೀರಿನ ವ್ಯಾಜ್ಯದ ನ್ಯಾಯಮಂಡಲಿಯಲ್ಲಿ ಒಬ್ಬ ಜಡ್ಜರ ಬದಲು ಮೂರು ಜಡ್ಜರಿರುವಂತೆ ತಿದ್ದುಪಡಿ ಮಾಡಲು ಕೇಂದ್ರ ನಿರ್ಧರಿಸಿದೆ.

★

**ನಾಂಗಳೂರು— ಕೇರಳಕ್ಕೆ ಅಕ್ರಮ ಸಾಗಾಣಿಕೆಯಾಗುತ್ತಿದ್ದ ರೂ. 20000 ಬೆಲೆಯ 100 ಮೂಟೆ ಅಕ್ಕಿಯನ್ನು ಎರಡು ಲಾರಿಗಳಿಂದ ವಶಪಡಿಸಿಕೊಂಡು ಮಾಲೀಕರನ್ನು ಬಂಧಿಸಲಾಗಿದೆ.**

## ಭಗವಂತನ ಚರಣಕಮಲಗಳನ್ನು ತಲುಪುವ ರೀತಿ

(ಮುಂದುವರಿದುದು)

ತಂದೆಯು ಬೈದು "ಅವನೊಬ್ಬ ಏನೂ ಪ್ರಯೋಜನವಿಲ್ಲದವನು : ಅವನನ್ನು ಮದುವೆಯಾದರೆ ನಿನ್ನ ಕಷ್ಟಕ್ಕೆ ಕೊನೆಯೇ ಇಲ್ಲ ; ಅಲ್ಲದೆ ಅವನು ಮುಸಲ್ಮಾನನು ; ಅವನನ್ನು ಮದುವೆಯಾದರೆ ನೀನೂ ಮುಸಲ್ಮಾನಳಾಗಬೇಕಾಗುವದು" ಎಂದು ಹೇಳಿದನು.

'ಅವನನ್ನು ಕ್ರಿಶ್ಚಿಯನ್ ಆಗುವಂತೆ ನಾನು ಪ್ರೇರೇಪಿಸಬಲ್ಲೆನಾದರೆ, ಹಾಗೇ ಮಾಡುತ್ತೇನೆ ; ತಪ್ಪಿದರೆ ನಾನು ಮುಸಲ್ಮಾನಳಾಗುತ್ತೇನೆ : ನಾನು ಅವನನ್ನು ಖಂಡಿತ ಮದುವೆಯಾಗಬೇಕು" ಎಂದಳು ಹುಡುಗಿ.

ಕಡೆಗೆ ತಂದೆಯು ಅತೃಪ್ತಿಯಿಂದ "ನಿನಗೆ ಹೇಗೆ ಬೇಕೋ ಹಾಗೆ ಮಾಡು" ಎಂದು ಹೇಳಿದನು.

ತಕ್ಷಣ ಹುಡುಗಿ ಯುವಕನ ಮನೆಗೆ ಹೋಗಿ 'ಏಳು ನಾನು ನಿನ್ನನ್ನು ಮದುವೆಯಾಗುತ್ತೇನೆ' ಎಂದು ಹೇಳಿದಳು.

ಯುವಕನು 'ನನಗೆ ಮದುವೆಯಾಗಿದೆ" ಎಂದು ಉತ್ತರಕೊಟ್ಟನು.

ಹುಡುಗಿಯು ಆಶ್ಚರ್ಯದಿಂದ "ಯಾತೊಂದಿಗೆ ಮದುವೆಯಾಗಿದೆ" ಎಂದು ಕೇಳಿದ್ದಕ್ಕೆ 'ದೇವರೊಂದಿಗೆ" ಎಂದು ಉತ್ತರಿಸಿದನು.

ಹುಡುಗಿಯು ಖಿನ್ನಮನಸ್ಕಳಾಗಿ ತನ್ನ ಮನೆಗೆ ವಾಪಸ್ಸಾದಳು. ಹುಡುಗನು ಮನೆಬಿಟ್ಟುಹೋಗಿ, ಫಕೀರನಾಗಿ ಚಿಟ್ಟಗಾಂಗ್ ಬೆಟ್ಟಗಳಲ್ಲಿ ಸ್ವಾಧೀನವಾಗಿ ವಾಸಿಸಿದನು.

ಈರೀತಿ ಭಗವಂತನ ಚರಣಕಮಲಗಳನ್ನು ಸೇರಬಹುದು. [ ಮುಂದಿರ್. ಟ್ರೂತ್

Respectfully dedicated
To The Director
of Publicity, Information
& Tourism
Hon'ble Govt. of Mysore
★

ಮೈಸೂರು ನಗರದ ಪತ್ರಿಕೆಗಳ ಸಂಪಾದಕರು ಮತ್ತು ಪ್ರಕಾಶಕರೂ ಹಿಂದೊಮ್ಮೆ ನಡೆಸಿದ ಸಭೆಯಲ್ಲಿ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟ ಠರಾವುಗಳಲ್ಲಿ
.... ಇದೂ ಒಂದು ....

ಮೈಸೂರು ರಾಜ್ಯ ಸರಕಾರವು ಪತ್ರಿಕೆಗಳಿಗೆ ಜಾಹಿರಾತು ಹಂಚುವಿಕೆಯಲ್ಲಿ ಅನುಸರಿಸುತ್ತಿರುವ ಈಗಿನ ವಿಧಾನ ಸಮರ್ಪಕ ರೀತಿಯಲ್ಲಿ ಇಲ್ಲದಿರುವುದರಿಂದ, ಜಾಹಿರಾತು ವಿಷಯದ ಸ್ಥಳೀಯ ಸ್ವಾಮುಖ್ಯತೆ ಅನುಸರಿಸಿ ಎಲ್ಲ ಸಣ್ಣ ಪತ್ರಿಕೆಗಳಿಗೂ ಪ್ರಮಾಣಾನುಸಾರವಾಗಿ ನಿಷ್ಪಕ್ಷಪಾತ ರೀತಿಯಿಂದ ಜಾಹಿರಾತು ವಿತರಣೆ ಮಾಡಬೇಕೆಂದು ಈ ಸಭೆ ರಾಜ್ಯ ಸರಕಾರವನ್ನು ಕೋರುತ್ತದೆ.

ಪುಡ್'ಲಾಂಡ್ ಜನಭಣಿತ 2 ನೇ ವಾರ
ಅಮೋಘ ಆರಂಭ
— ಮುಪ್ಪೋಹಕ್ಕ ಈಸ್ಮೆ ಕಲರ್ ಹಿಂದಿ ಚಿತ್ರ —
Jhuk Gaya Aasman
ಜುಕ್' ಗಯಾ ಆಸ್ಮಾನ್
ಪಾತ್ರ — ರಾಜೇಂದ್ರ ಕುಮಾರ್, ಸೈರಾಬಾನು, ಪ್ರೇಂ ಚೋಪ್ರ, ರಾಜೇಂದ್ರನಾಥ್
ಸಂಗೀತ— ಶಂಕರ್ ಜೈಕಿಷನ್ [ ದಿನ 3 ಪ್ರದರ್ಶನಗಳು ]

ಆಪೇರ 5-7-68 ರಿಂದ
ಚಿತ್ರಾಕರ್ಷ ಕನ್ನಡ ಚಿತ್ರ
ನಮ್ಮ ಊರು
ಪಾತ್ರ-: ಉಡುಪಿ ಕುಮಾರ್ ಅಶ್ವತ್ಥ್ ಡಾಲಕೃಷ್ಣ ಕೃಷ್ಣಕುಮಾರಿ

Help The Gorakshana
ಗೋರಕ್ಷಣಾಕ್ಕೆ ಜೊಂಬಲ ನೀಡಿ
ಶ್ರೀದಕ್ಷಿಣಾಚಾರ್ಯಜಗದ್ಗುರು ಮಹಾಸಂಸ್ಥಾನಮಿಗಳವರು ಶ್ರೀ ಶೃಂಗೇರಿ ಜಗದ್ಗುರು ಮಹಾಸಂಸ್ಥಾನಮಿಗಳವರು ಉಜಾರೆ ಅಡಿಗ್ರಹ ಕ್ಷೇತ್ರದಲ್ಲಿ
ಕನ್ನಡನಾಡಿನಲ್ಲಿ ಗೋರಕ್ಷಣೆ ಪಶುಪಾಲನೆ, ತಳಿಸಂವರ್ಧನೆ, ಪಶುವೈದ್ಯ, ಎಜೆನ್ಸಿಗಳ ವಿಸ್ತೃತ ಪ್ರಚಾರ ಪತ್ರಿಕೆ ವಾರ್ಷಿಕ ಚಂದಾ 50 ಪೈಸೆ
— ಗೋರಕ್ಷಣೆ ವ್ಯವಸಾಯದಕ್ಕಾಗಿ ವಿನಂತಿ —
ಗೋರಕ್ಷಣಾಕ್ಕೆ ಲೇಖನಗಳನ್ನೂ ಪ್ರೋತ್ಸಾಹಕ ಧನವನ್ನೂ ದಾನದಾತರಿಂದ ಸ್ವೀಕರಿಸಲಾಗುವುದು
ಚಂದಾದಾರರಾಗಿದ್ದು ಕಳೆದಿರುವವರು ಇವರಲ್ಲಿ ಚಂದಾ ಪಾವತಿಮಾಡಬೇಕಾಗಿ ವಿನಂತಿ
ಡಾ|| ಪಿ ಎಸ್ ನಾರಾಯಣ್, ಶ್ರೀ ಪಿಎಸ ವಿಶ್ವನಾಥ್ ಜಯನಗರ, ಬೆಂಗಳೂರು
ಶ್ರೀ ಬಿ ಜಿ. ಶಾಸ್ತ್ರಿಗಳು, 1030 ವಿದ್ಯಾರಣ್ಯಪುರ, ಮೈಸೂರು
ಶ್ರೀ ಅನಂತಸಂಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರಸಭಾ, ಹೊಂಗಸಂದ್ರ
ಗೋರಕ್ಷಣ ಆಫೀಸು ಸತ್ಯವಾದಿ ಪ್ರೆಸ್ ಚಾಮರಾಜಪುರಂ ಮೈಸೂರು 4
ವಿಳಾಸ— ಗೋರಕ್ಷಣ ಆಫೀಸು 1067 ಚಾಮರಾಜಪುರಂ, ಮೈಸೂರು-4

Cow Slaughter should be banned Immediately
.....
ಗೋವಧೆ ಕೂಡಲೆ ನಿಷೇಧವಾಗಲಿ
Protect the Cow
★
ಗೋರಕ್ಷಣೆ ಮತ್ತು ಕಾರ್ಯನಿರ್ವಹಣೆಯ ಕಾರ್ಯಗಳು ಹೆಚ್ಚಿ ಬೆಳೆಯಲಿ

Edited, Printed & Published by Dharmapracharee Nirata M S Krishna Rao ( Proprietor ) at the Satyavadi Press Chamarajapuram, Mysore-4

## — ತುಳು ಗಾದೆಗಳು —

ನರಿಯ ತಂತ್ರ ಕೋಳಿಗೇನು ಗೊತ್ತು ?

ನರಕದಲ್ಲಿ ಮಿತ್ರನಿಲ್ಲ, ಸ್ವರ್ಗದಲ್ಲಿ ಶತ್ರುವಿಲ್ಲ.

ಲೆಕ್ಕ ತಿಳಿಯದವನು ಬಡ್ಡಿಗೆ ಹಣ ಕೊಟ್ಟಂತೆ.

ನ್ಯಾಯಕ್ಕೆ ನೀತಿಯ ಬಲ, ಅನ್ಯಾಯಕ್ಕೆ ದಂಡದ ಬಲ.

ನರಕದಲ್ಲಿ ಭೇದಭಾವವಿಲ್ಲ, ಸ್ವರ್ಗದಲ್ಲಿ ರೋಗರುಜಿನವಿಲ್ಲ.

ಹುಲಿ ಹೆಬ್ಬುಲಿಗಳಿಗೆ ಹೆದರದವಳು ತಟ್ಟಿಪಟಕ್ಕೆ ಹೆದರಿಯಾಳೇ ?

ಯಮನೊಡನೆ ನೆವನ ನಡೆಯದು, ದೇವನಿಕಡನೆ ಸುಳ್ಳು ನಡೆಯದು.

ನೂರು ಗಂಡನ್ನು ತೂಕಬಹುದು, ಹತ್ತು ಹೆಣ್ಣನ್ನು ಸಾಕುವುದು ಕಷ್ಟ.

ಎರಡು ಕೊಳ್ಳಿಗಳು ಒಟ್ಟಾಗದೆ ಬೆಂಕಿ ಹತ್ತದು, ಸಿಡುಕರಿಬ್ಬರು ಒಟ್ಟುಕೂಡ ಜಗಳವಾಗದು.

ಹತ್ತರಲ್ಲಿ ಮುಕ್ಕಳಾಟಿಕೆ, ಇಪ್ಪತ್ತರಲ್ಲಿ ಚೆಲುವು, ಮೂವತ್ತರಲ್ಲಿ ದುಗುಡು, ನಲ್ವತ್ತರಲ್ಲಿ ಮಧ್ಯಮ. ಐವತ್ತರಲ್ಲಿ ಮಾತುಗಾರಿಗೆ, ಅರವತ್ತರಲ್ಲಿ ವಾದ, ಎಪ್ಪತ್ತರಲ್ಲಿ ನಿಸ್ಸಾರ, ಎಂಭತ್ತರಲ್ಲಿ ಊರುಗೋಲು, ತೊಂಭತ್ತರಲ್ಲಿ ಶಯನ, ನೂರರಲ್ಲಿ ಪಯಣ.

## Golden Jubilee of 'Satyavadi'

The golden jubilee of the 'Satyavadi' is to be celebrated in July.

The President, the Prime Minister, H. H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav Shenoi Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) have generously extended donations and best wishes.

It is wellknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.


# SHAKTI SUDHA

A SuperbTonic



## ವುಡ್‌ಲಾಂಡ್ಸ್ ಜನಭರಿತ 3 ನೇ ವಾರ

ಅಮೋಘ ಆರಂಭ

— ಮನೋಹರ ಈಸ್ಮ್ ಕಲರ್ ಹಿಂದಿ ಚಿತ್ರ —

## Jhuk Gaya Aasman

## ಜುಕ್ ಗಯಾ ಆಸ್ಮಾನ್

ಪಾತ್ರ — ರಾಜೇಂದ್ರಕುಮಾರ್, ಸೈದಾಬಾನು, ಪ್ರೇಂ ಭೋಪ್ರ, ರಾಜೇಂದ್ರನಾಥ್

ಸಂಗೀತ— ಶಂಕರ್ ಜೈಕಿಷನ್ [ದಿನ 3 ಪ್ರದರ್ಶನಗಳು]

## ಆಪೇರ ಅಮೋಘ 2 ನೇ ವಾರ

ಚಿತ್ತಾಕರ್ಷಕ ಕನ್ನಡ ಚಿತ್ರ

## ನಮ್ಮ ಊರು

ಪಾತ್ರ :— ಉದಯ ಕುಮಾರ್ ಅಶ್ವಥ್ ದಾಲಕೃಷ್ಣ ಕೃಷ್ಣಕುಮಾರಿ


## Help The Gorakshana

ಗೋರಕ್ಷಣಾರ್ಥ ಬೆಂಬಲ ನೀಡಿ :

ಶ್ರೀಶಾರದಾ ಜಗದ್ಗುರು ಮಹಾಸನ್ನಿಧಿಗಳವರು ಶ್ರೀ ಶೃಂಗೇರಿ ಜಗದ್ಗುರು

ಮಹಾಸನ್ನಿಧಿಗಳವರು ಉದಾರ ಅನುಗ್ರಹ ಕೃಪೆಯಾಗಿದೆ

ಕರ್ನಾಟಕದಲ್ಲಿ ಗೋಸಂರಕ್ಷಣೆ ಪಶುಸಂವರ್ಧನೆ, ತಳಿಸುಧಾರಣೆ, ಪಶುವೈದ್ಯ,

ಪಶುಸಂರಕ್ಷಣೆ ಎಲ್ಲೆಲ್ಲ ಪ್ರಚಾರ ಹರಡಬೇಕಿದೆ ; ವಾರ್ಷಿಕ ಚಂದಾ 50 ಪೈಸೆ

— ಗೋಸಂರಕ್ಷಣೆ ವ್ಯವಸಾಯಕ್ಕಿಂತಲೂ ಏನಂತೆ —

ಗೋಸಂರಕ್ಷಣೆಗೆ ಲೇಖನಗಳನ್ನೂ ಪ್ರೋತ್ಸಾಹಕ ಧನವನ್ನೂ

ಪೂರ್ಣಸಾಹಾಯ್ಯಕವಾಗಿ ಸ್ವೀಕರಿಸಲಾಗುವುದು

ಚಂದಾವಾಣಿಯಿದೆ ಕಳೆದಿರುವವರು ಇವರಲ್ಲಿ ಚಂದಾ ವಾವತಿಮಾಡಬೇಕಾಗಿ ವಿನಂತಿ

ಡಾ|| ಪಿ ಎಸ್ ನಂಜುಂಡಯ್ಯ, ಶ್ರೀ ಪಿ.ಎನ ವಿಶ್ವನಾಥ್ ಜಯನಗರ, ಬೆಂಗಳೂರು

ಶ್ರೀ ಜಿ ಡಿ. ಶಾಸ್ತ್ರಿಗಳು, 1030 ವಿದ್ಯಾರಣ್ಯಪುರಂ, ಮೈಸೂರು

ಶ್ರೀ ಅನಂತಸಂಸಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರಸಭಾ,ಹೊಂಗನೂರು

ಗೋಸಂರಕ್ಷಣ ಆಫೀಸು ಸತ್ಯವಾದಿಪ್ರೆಸ್ ಚಾಮರಾಜಪುರಂ ಮೈಸೂರು 4

ವಿಳಾಸ — ಗೋಸಂರಕ್ಷಣ ಆಫೀಸು 1067 ಚಾಮರಾಜಪುರಂ, ಮೈಸೂರು

## Cow Slaughter should be banned Immediately

.....

## ಗೋವಧೆ ಕೂಡಲೆ ನಿಷೇಧವಾಗಲಿ

## Protect the Cow

★

ಗೋರಕ್ಷಣೆ ಮತ್ತು ಸಂವರ್ಧನೆಯಲ್ಲಿ ಅಭಿಮಾನಿಗಳು ಕೈಜೋಡಿಸಿ ಸಹಕರಿಸಬೇಕು


Edited, Printed & Published by Dharmaprachara Niyata M S Krishna Rao (Proprietor) at the Satyavadi Press Chamarajapuram, Mysore 4